RNU AIR DHARWAD

AUGUST 24, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**ನೆರೆಯ ಮಹಾರಾಷ್ಟ್ರ ರಾಜ್ಯದ, ಉಜಿನಿ ಜಲಾಶಯದಿಂದ, ಒಂದೂವರೆ ಲಕ್ಷ ಕ್ಯೂಸೆಕ್ ಅಡಿಗಳಷ್ಟು ನೀರು, ಹರಿಬಿಟ್ಟ ಹಿನ್ನೆಲೆ, ಕಲಬುರಗಿ ಜಿಲ್ಲೆಯ, ಭೀಮಾ ನದಿ ದಡದಲ್ಲಿರುವ, ಜೇವರ್ಗಿ, ಅಫಜಲಪುರ, ಕಲಬುರಗಿ ಹಾಗೂ ಚಿತ್ತಾಪುರ ತಾಲೂಕಿನ ಕೆಲ ಭಾಗಗಳು ಸೇರಿ, 100ಕ್ಕೂ ಹೆಚ್ಚು ಹಳ್ಳಿಗಳಲ್ಲಿ ನೆರೆ ಭೀತಿ ಎದುರಾಗಿದೆ. ನಿನ್ನೆ ರಾತ್ರಿಯಿಂದ ನೀರಿನ ಹರಿವು ತಗ್ಗಿದೆ. ಆದರೆ, ಮುಂದಿನ ಎರಡು ದಿನಗಳ ಕಾಲ, ಪ್ರವಾಹ ಸಾಧ್ಯತೆ ಇದ್ದು, ನದಿ ಪಾತ್ರದ ಜನ ಮುಂಜಾಗ್ರತೆ ವಹಿಸುವಂತೆ, ಜಿಲ್ಲಾಡಳಿತ ಕೋರಿದೆ.**

<><><>

**ಜಾನಪದ ಗಾಯಕಿ, ಕಾಡುಗೊಲ್ಲ ಬುಡಕಟ್ಟು ಸಮುದಾಯಕ್ಕೆ ಸೇರಿದ, ಸಿರಿಯಜ್ಜಿಯ ಸ್ಮಾರಕ, ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕು, ದೇವರಮರಿ ಕುಂಟೆ ಗ್ರಾಮದ, ಯಲಗಟ್ಟೆ ಗೊಲ್ಲರ ಹಟ್ಟಿಯಲ್ಲಿ ಇಂದು ಲೋಕಾರ್ಪಣೆ ಗೊಳ್ಳಲಿದೆ. ಎರಡೂವರೆ ಲಕ್ಷ ರೂಪಾಯಿ ವೆಚ್ಚದಲ್ಲಿ, ಈ ಸ್ಮಾರಕ ನಿರ್ಮಾಣಗೊಂಡಿದ್ದು, ಭಾರತೀಯ ಅರಣ್ಯ ಸೇವೆಯ ನಿವೃತ್ತ ಅಧಿಕಾರಿ ಚಿಕ್ಕಪ್ಪಯ್ಯ ಉಪ ಪೊಲೀಸ್ ವರಿಷ್ಠಾಧಿಕಾರಿ ಟಿ.ಬಿ. ರಾಜಣ್ಣ ಹಾಗೂ ಜಾನಪದ ಸಿರಿ ನಾಡೋಜ ಅಭಿಮಾನಿ ಬಳಗದವರು ಈ ಸ್ಮಾರಕ ನಿರ್ಮಿಸಿದ್ದಾರೆ.**

<><><>

**ಕಿತ್ತೂರು ಕರ್ನಾಟಕ ಭಾಗದಲ್ಲಿ, ಭತ್ತದ ತಳಿ ಮತ್ತು ಬೆಳೆ ಉತ್ತೇಜಿಸಲು, ಹಾವೇರಿ ಜಿಲ್ಲೆ, ಶಿಗ್ಗಾವಿ ತಾಲೂಕು, ತಿಮ್ಮಾಪುರದಲ್ಲಿ, 50 ಲಕ್ಷ ರೂಪಾಯಿ ವೆಚ್ಚದಲ್ಲಿ, ಅಕ್ಕಿ ಮಿಲ್ ಸ್ಥಾಪಿಸಲು ಯೋಜಿಸಲಾಗಿದೆ ಎಂದು, ಬೆಂಗಳೂರಿನ ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ, ಕೃಷ್ಣಪ್ರಸಾದ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ, ದೇಸಿ ಅಕ್ಕಿ ಮೇಳದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಬೆಳಗಾವಿ ಭಾಗದಲ್ಲಿ ಬೆಳೆಯಲಾಗುವ, ಕರಿ ಗಜವಿಲಿ ಭತ್ತದ ತಳಿ, ಆರೋಗ್ಯಕ್ಕೆ ಉತ್ತಮ. ಶಿಗ್ಗಾಂವಿ, ಹಾನಗಲ್, ಕಲಘಟಗಿ, ಸಿದ್ದಾಪುರ, ಯಲ್ಲಾಪುರ ಹಾಗೂ ಕುಂದಗೋಳ ಭಾಗದಲ್ಲಿ, ಹಲವು ವಿಶೇಷ ತಳಿಯ ದೇಸಿ ಭತ್ತಗಳನ್ನು ಬೆಳೆಯಲಾಗುತ್ತಿದೆ. ಸೀಮಿತ ತಳಿಗಳ ಜೊತೆಗೆ, ಔಷಧೀಯ ಗುಣವುಳ್ಳ ವೈವಿಧ್ಯಮ ಭತ್ತದ ದೇಸಿ ತಳಿಗಳನ್ನು ಬೆಳೆಸಿ, ಉಳಿಸಬೇಕಿದೆ ಎಂದರು.**

<><><>

**32 ತಳಿಗಳ ಅಕ್ಕಿಯನ್ನು ಪ್ರದರ್ಶನಕ್ಕೆ ಅಣಿಗೊಳಿಸಲಾಗಿದೆ. 12 ಬಗೆಯ ಅಕ್ಕಿ ಮಾರಾಟಕ್ಕೆ ಲಭ್ಯ ಇವೆ. ಇಂದು ಸಂಜೆ, ಎರಡು ದಿನಗಳ ಈ ಅಕ್ಕಿ ಮೇಳ, ಗೋಕುಲ ರಸ್ತೆಯ ಅರ್ಬನ್ ಓಯಾಸಿಸ್ ಮಾಲ್‌ನಲ್ಲಿ ಸಂಪನ್ನಗೊಳ್ಳಲಿದೆ.**

<><><>

**ಪ್ರತಿಭೆ, ಸೃಜನಶೀಲತೆ ಹೊಂದಿರುವ, ಗ್ರಾಮೀಣ ಯುವಶಕ್ತಿಯ ಸಾಮರ್ಥ್ಯಕ್ಕೆ, ಅರಿವು ಕೇಂದ್ರಗಳು, ಸಾಣೆ ಹಿಡಿಯುತ್ತಿವೆ. ಆಧುನಿಕ ಸವಲತ್ತುಗಳೊಂದಿಗೆ, ಯುವಜನರಿಗೆ ಆಪ್ತವಾಗುತ್ತಿವೆ ಎಂದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.**

<><><>

ಧಾರವಾಡ ತಾಲೂಕು, ಕುರುಬಗಟ್ಟಿ ಗ್ರಾಮ ಪಂಚಾಯ್ತಿಯ ಅರಿವು ಕೇಂದ್ರದ ಕುರಿತು, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ನಾಗರತ್ನ ತಪೇಲಿ, ಫಲಾನುಭವಿ ಹಾಗೂ ಗ್ರಂಥಾಲಯ ಮೇಲ್ವಿಚಾರಕ ಫಕ್ಕೀರಪ್ಪ ಸರದಾರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನಾಗರತ್ನ ತಪೇಲಿ, ಫಲಾನುಭವಿ, ಫಕೀರಪ್ಪ ಸರದಾರ ಧ್ವನಿ 35 ಸೆಕೆಂದುಗಳು

<><><>

ಈ ಬಾರಿಯ ಗೌರಿ, ಗಣೇಶ ಹಬ್ಬದ ಸಂಭ್ರಮಾಚರಣೆ ವೇಳೆ, ನಮ್ಮ ಸುತ್ತಲಿನ ಪರಿಸರವನ್ನು, ಜಲ ಮೂಲಗಳ ಸ್ವಚ್ಛತೆಯನ್ನು ಕಾಯ್ದುಕೊಳ್ಳುವ ಸಂಕಲ್ಪ ಮಾಡೋಣ ಎಂದು, ವಿಧಾನಸಭೆ ವಿಪಕ್ಷ ಸಹ ನಾಯಕ, ಅರವಿಂದ ಬೆಲ್ಲದ, ಎಕ್ಸ್ ಮಾಧ್ಯಮದ ಮೂಲಕ, ನಾಡಿನ ಜನತೆಗೆ ಮನವಿ ಮಾಡಿದ್ದಾರೆ. ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆ ಆಯೋಜಿಸಿದ, 'ಇಕೋ ಭಕ್ತಿ ಸಂಭ್ರಮ'ವನ್ನು ಸ್ವಾಗತಿಸಿ, ಪ್ಲಾಸ್ಟರ್ ಆಫ್ ಪ್ಯಾರಿಸ್, ಪಿ.ಒ.ಪಿ. ಗಣೇಶ ವಿಗ್ರಹ ಖರೀದಿಸದೆ, ಪರಿಸರ ಸ್ನೇಹಿ ಮಣ್ಣಿನ ಗಣೇಶನನ್ನು ಪ್ರತಿಷ್ಠಾಪಿಸಿ, ಜಲ ಮಾಲಿನ್ಯವನ್ನು ತಡೆಗಟ್ಟಲು ಪಾಲಿಕೆಯೊಂದಿಗೆ ಕೈ ಜೋಡಿಸಿ ಎಂದು ಅವರು ಕೋರಿದ್ದಾರೆ. ಎಲ್ಲರಿಗೂ ಒಳಿತಾಗಲಿ, ವಿಘ್ನ ವಿನಾಶಕನ ಆಗಮನದಿಂದ ಸುಖ, ಶಾಂತಿ, ಸಮೃದ್ಧಿ ದೊರೆಯಲಿ ಎಂದು, ಹಾರೈಸಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಹಾರುಗೇರಿಯ ಕೆನರಾ ಬ್ಯಾಂಕ್ ಶಾಖೆ, ರಾಯಬಾಗ್ ಗ್ರಾಮ ಪಂಚಾಯಿತಿ, ಅಳಗವಾಡಿಯಲ್ಲಿ 'ಜನ ಸುರಕ್ಷಾ ಕಾರ್ಯಕ್ರಮ' ಆಯೋಜಿಸಿದ್ದವು. ಜಿ.ಕೆ. ಹಿರೇಮಠ ಮಾತನಾಡಿ, ಪ್ರಧಾನಮಂತ್ರಿ ಜನ್–ಧನ್ ಯೋಜನೆ, ಪ್ರಧಾನಮಂತ್ರಿ ಜೀವನ ಜ್ಯೋತಿ ವಿಮೆ, ಪ್ರಧಾನಮಂತ್ರಿ ಸುರಕ್ಷಾ ವಿಮೆ ಯೋಜನೆ ಮತ್ತು ಅಟಲ್ ಪಿಂಚಣಿ ಯೋಜನೆ ಹಾಗೂ ಸೈಬರ್ ಸುರಕ್ಷತೆ ಕುರಿತು ಮಾಹಿತಿ ನೀಡಿದರು.

<><><>

ಉಡುಪಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿತ, 23 ವರ್ಷದೊಳಗಿನವರ, ಅಥ್ಲೆಟಿಕ್ಸ್ ಕ್ರೀಡಾಕೂಟದ, ಟ್ರ್ಯಾಕ್ ಇವೆಂಟ್‌ನಲ್ಲಿ, ಧಾರವಾಡದ ಪ್ರಸನ್ನಕುಮಾರ, ಬೆಳಗಾವಿಯ ವೈಷ್ಣವಿ ಹಾಗೂ ಬೆಂಗಳೂರಿನ ಓಂಕಾರ, ದಾಖಲೆಯೊಂದಿಗೆ, ಚಿನ್ನದ ಪದಕವನ್ನು ಮುಡಿಗೇರಿಸಿಕೊಂಡಿದ್ದಾರೆ.

<><><>

ವಿಜಯನಗರ ಜಿಲ್ಲೆ, ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ, ಹೊಸಪೇಟೆಯ ತುಂಗಭದ್ರಾ ಬೋರ್ಡ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ಆಯೋಜಿಸಿದ್ದ, ರಾಜ್ಯ ಮಟ್ಟದ ರ್‍ಯಾಂಕಿಂಗ್, 17 ವರ್ಷದೊಳಗಿನವರ, ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್ ಪಂದ್ಯದಲ್ಲಿ, ಅರ್ಣವ್ ಎನ್. ಹಾಗೂ ಶಿವಾನಿ ಮಹೇಂದ್ರನ್ ಜಯಶಾಲಿಯಾಗಿದ್ದಾರೆ.

<><><>

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಬೀದಿ ಬದಿ ನಾಯಿ ಮರಿಗಳ ಆರೋಗ್ಯ ತಪಾಸಿಸಿ, ಲಸಿಕೆ ನೀಡಿದ್ದು, ಸಾರ್ವಜನಿಕರು ದತ್ತು ಪಡೆದು ಆಶ್ರಯ ನೀಡುವಂತೆ, ಮನವಿ ಮಾಡಿದೆ. ಇಂದು, ಹುಬ್ಬಳ್ಳಿಯ ತೋಳನಕೆರೆ ಆವರಣದಲ್ಲಿ, ಮಹಾನಗರ ಪಾಲಿಕೆಯಿಂದ, ಶ್ವಾನ ದತ್ತು ಅಭಿಯಾನ ಜರುಗುತ್ತಿದೆ.

<><><>

ಕೇಂದ್ರ ಗೃಹ ಸಚಿವಾಲಯ, ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್ www.cybercrime.gov.in ಮತ್ತು ರಾಷ್ಟ್ರೀಯ ಸೈಬರ್ ಸಹಾಯವಾಣಿ ಸಂಖ್ಯೆ 1–9–3–0 ಆರಂಭಿಸಿದೆ. ಆನ್ಲೈನ್ ಹಣಕಾಸು ವಂಚನೆ ಹಾಗೂ ಇತರೆ ಸೈಬರ್ ಅಪರಾಧಗಳನ್ನು ತಕ್ಷಣ ದಾಖಲಿಸಲು, ಅನುವು ಮಾಡುತ್ತದೆ.

<><><>